ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 113

ಸದಸ್ಯರ ಹೆಸರು ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
ವಿಧಾನ ಸಭೆಯಿಂದ
ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 14.02.2024

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಭೀಕರ ಬರದಿಂದಾಗಿ ಅತೀವ ನಷ್ಟ ಸಂಭವಿಸಿದ್ದು ರೈತರು ಅತ್ಯಂತ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದ ಬರ ನಿರ್ವಹಣೆ ಕೈಪಿಡಿ-2020ರನ್ವಯ ರಾಜ್ಯದ 223 ತಾಲ್ಲೂಕುಗಳನ್ನು (196 ತೀವ್ರ ಬರ & 27 ಸಾಧಾರಣ ಬರ) ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.<br><br>ಪ್ರತಿ ಜಿಲ್ಲೆಯ ಬರ ಘೋಷಣೆ ಆಗಿರುವ ತಾಲುಕುಗಳಲ್ಲಿ ಜಿಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡಂತ ತಂಡಗಳನು ರಚಿಸಿ,ಸದರಿ ತಂಡಗಳು |
| (ಆ) ಬಂದಿದ್ದಲ್ಲಿ, ಭೀಕರ ಬರದಿಂದಾಗಿ ಆಗಿರುವ ನಷ್ಟದ ಅಂದಾಜು ಮೊತ್ತವೆಷ್ಟು; | ಬೆಳೆಹಾನಿಯ ಜಂಟಿ ಸಮೀಕ್ಷೆ ನಡೆಸಿ ಎಲ್ಲಾ ಮಾಹಿತಿಯನ್ನು ಕ್ರೋಢೀಕರಿಸಿ ದೃಢೀಕರಿಸಿಕೊಂಡು ಜಿಲಾಧಿಕಾರಿಗಳು ನೀಡಿದ ವರದಿಯ ಆಧಾರದ ಮೇಲೆ ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ 46.11 ಲಕ್ಷ ಹೆಕ್ಟೇರ್ ಕೃಷಿ ಹಾಗೂ 2.06 ಲಕ್ಷ ಹೆಕ್ಟೇರ್ ತೋಟಗಾರಿಕೆ ಬೆಳೆಗಳನ್ನು ಸೇರಿದಂತೆ ಒಟ್ಟು 48.17 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ.<br><br>ಬರ ಪರಿಸ್ಥಿತಿಯಿಂದ ಅಂದಾಜು ರೂ.35,162 ಕೋಟಿಗಳಷ್ಟು ಬೆಳೆ ಹಾನಿಯಾಗಿದೆ.<br><br>ಕೇಂದ್ರ ಸರ್ಕಾರದ SDRF ಮಾರ್ಗಸೂಚಿಯನ್ವಯ ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿಗೆ NDRF ಅಡಿಯಲ್ಲಿ ರೂ4663.12. ಕೋಟಿ, ಕುಡಿಯುವ ನೀರು ಪೂರೈಕೆಗಾಗಿ ರೂ.566.78 ಕೋಟಿ, ಜಾನುವಾರು ಸಂರಕ್ಷಣೆಗಾಗಿ ರೂ.363.68 ಕೋಟಿ ಹಾಗೂ ಜೀವನಾಂಶ ನಷ್ಟ ಪರಿಹಾರಕ್ಕಾಗಿ ರೂ.12,577.90 ಕೋಟಿ ಸೇರಿದಂತೆ ಒಟ್ಟು ರೂ.18,171.44 ಕೋಟಿ ಆರ್ಥಿಕ ನೆರವು |

| | |
|---|---|
| | ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೋರಾಂಡಂ ಸಲ್ಲಿಸಲಾಗಿದ್ದು, ಕೇಂದ್ರದಿಂದ ಅನುದಾನ ನಿರೀಕ್ಷಿಸಲಾಗಿದೆ. |
| (ಇ) ಸರ್ಕಾರ ಸದರಿ ಬರ ಪರಿಹಾರಕ್ಕೆ ಇದುವರೆಗೆ ಎಷ್ಟು ಹಣವನ್ನು ಈಗಾಗಲೇ ಬಿಡುಗಡೆ ಮಾಡಿದೆ; | ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ ರಾಜ್ಯ ವಿಪತ್ತು ಪರಿಹಾರ ನಿಧಿ (SDRF) ಮಾರ್ಗಸೂಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ಗರಿಷ್ಠ ರೂ.2,000/- ರವರೆಗೆ ಪ್ರತಿ ರೈತರಿಗೆ, ಗರಿಷ್ಠ 2 ಹೆಕ್ಟೇರ್‌ಗಳಿಗೆ ಸಿಮೀತಗೊಳಿಸಿ ಪಾವತಿಸಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತರಿಗೆ ರೂ.685 ಕೋಟಿ ಬಿಡುಗಡೆಗೊಳಿಸಿದ್ದು, ಈ ಪೈಕಿ ದಿನಾಂಕ:12-02-2024ರವರೆಗೆ 33.09 ಲಕ್ಷ ಅರ್ಹ ರೈತರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗಳಿಗೆ ರೂ.628.03 ಕೋಟಿಗಳನ್ನು ನೇರವಾಗಿ ಡಿಬಿಟಿ ಮೂಲಕ ಜಮೆ ಮಾಡಲಾಗಿದೆ. |
| (ಈ) ಅತೀವ ಸಂಕಷ್ಟದಲ್ಲಿರುವ ರೈತರಿಗೆ ಬರ ಪರಿಹಾರಕ್ಕೆ ಸಂಬಂಧಿಸಿದಂತೆ ನೀಡಲು ಇನ್ನೂ ಬಾಕಿ ಇರುವ ಪರಿಹಾರದ ಹಣದ ಮೊತ್ತವೆಷ್ಟು ; (ಜಿಲ್ಲಾವಾರು ವಿವರ ನೀಡುವುದು) | ಬೆಳೆ ಹಾನಿ ಪರಿಹಾರ ನೀಡಲು FRUITS ತಂತ್ರಾಂಶದಿಂದ ಪಡೆದ ದತ್ತಾಂಶವನ್ನು, ಆಧಾರ್‌ನಲ್ಲಿರುವ ಹೆಸರು ಮತ್ತು ಪಹಣಿ ಪತ್ರಿಕೆಯಲ್ಲಿರುವ ಹೆಸರು ಹಾಗೂ ವಾಸ್ತವಿಕ ಬೆಳೆದ ಬೆಳೆಯನ್ನು ಬೆಳೆ ಸಮೀಕ್ಷೆ ಮಾಹಿತಿ ಆಧಾರದ ಮೇಲೆ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಅರ್ಹರಿರುವ ರೈತರಿಗೆ ದಿನಾಂಕ:12-02-2024ರವರೆಗೆ 33.09 ಲಕ್ಷ ರೈತರಿಗೆ ರೂ.628.03 ಕೋಟಿ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗಳಿಗೆ ಬೆಳೆ ಪರಿಹಾರ ವಿತರಿಸಲಾಗಿದೆ. **(ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿ ಒದಗಿಸಿದೆ**).<br><br>ಕೇಂದ್ರ ಸರ್ಕಾರದ SDRF ಮಾರ್ಗಸೂಚಿಯನ್ವಯ ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿಗೆ N D R F ಅಡಿಯಲ್ಲಿ ರೂ4663.12.ಕೋಟಿಗಳ ಆರ್ಥಿಕ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೋರಾಂಡಂ ಸಲ್ಲಿಸಲಾಗಿದ್ದು, ಕೇಂದ್ರದಿಂದ ಅನುದಾನ ನಿರೀಕ್ಷಿಸಲಾಗಿದೆ. |
| (ಉ) ಬಾಕಿ ಇರುವ ಬರ ಪರಿಹಾರದ ಹಣವನ್ನು ಇಲ್ಲಿಯವರೆಗೂ ರೈತರಿಗೆ ಸಂದಾಯ ಮಾಡದಿರಲು ಕಾರಣಗಳೇನು? | ಕೇಂದ್ರ ಸರ್ಕಾರದಿಂದ NDRF ಅನುದಾನದ ಸ್ವೀಕರಿಸಿದ ತಕ್ಷಣವೆ ಬಾಕಿ ಪರಿಹಾರವನ್ನು .ಸಂದಾಯ ಮಾಡ ಲಾಗುವುದು |

| | |
|---|---|
| | |

ಕಡತ ಸಂಖ್ಯೆ: ಕಂಇ 57 ಟಿಎನ್‌ಆರ್ 2024

(ಕೃಷ್ಣ ಭೈರೇಗೌಡ)
ಕಂದಾಯ ಸಚಿವರು

# ಅನುಬಂಧ

**2023ನೇ ಸಾಲಿನ ಮುಂಗಾರು ಹಂಗಾಮಿನ ಬರ-ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ SDRF/NDRF ಮಾರ್ಗಸೂಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ರೂ.2,000/- ರವರೆಗೆ ರೈತರಿಗೆ ಪಾವತಿಸಿರುವ ಜಿಲ್ಲಾವಾರು ವಿವರ:**

| ಕ್ರ. ಸಂ. | ಜಿಲ್ಲೆ | ಫಲಾನುಭವಿಗಳ ಸಂಖ್ಯೆ | ಪರಿಹಾರ ಮೊತ್ತ |
|---|---|---|---|
| 1 | ಬಾಗಲಕೋಟೆ | 160128 | 317526550 |
| 2 | ಬೆಂಗಳೂರು ಗ್ರಾಮಾಂತರ | 59342 | 106684023 |
| 3 | ಬೆಂಗಳೂರು ನಗರ | 12241 | 21437292 |
| 4 | ಬೆಳಗಾವಿ | 341415 | 635135398 |
| 5 | ಬಳ್ಳಾರಿ | 35099 | 69087578 |
| 6 | ಬೀದರ್ | 146255 | 281790854 |
| 7 | ವಿಜಯಪುರ | 252169 | 502886114 |
| 8 | ಚಾಮರಾಜನಗರ | 43772 | 82005733 |
| 9 | ಚಿಕ್ಕಮಗಳೂರು | 46853 | 87733678 |
| 10 | ಚಿತ್ರದುರ್ಗ | 131402 | 255629499 |
| 11 | ದಕ್ಷಿಣ ಕನ್ನಡ | 1338 | 2312064 |
| 12 | ದಾವಣಗೆರೆ | 75636 | 145273725 |
| 13 | ಧಾರವಾಡ | 101584 | 198229301 |
| 14 | ಗದಗ | 108984 | 214842050 |
| 15 | ಕಲಬುರಗಿ | 264918 | 526321005 |
| 16 | ಹಾಸನ | 202503 | 370969103 |
| 17 | ಹಾವೇರಿ | 186846 | 355721072 |
| 18 | ಕೊಡಗು | 10873 | 17528017 |
| 19 | ಕೋಲಾರ | 50070 | 89065248 |
| 20 | ಕೊಪ್ಪಳ | 96425 | 190646604 |
| 21 | ಮಂಡ್ಯ | 75025 | 132397666 |
| 22 | ಮೈಸೂರು | 88625 | 158378077 |
| 23 | ರಾಯಚೂರು | 120508 | 239408940 |
| 24 | ಶಿವಮೊಗ್ಗ | 75423 | 142942218 |
| 25 | ತುಮಕೂರು | 178584 | 322690276 |
| 26 | ಉಡುಪಿ | 18523 | 25993906 |
| 27 | ಉತ್ತರ ಕನ್ನಡ | 71407 | 113881824 |
| 28 | ಚಿಕ್ಕಬಳ್ಳಾಪುರ | 86773 | 157782376 |
| 29 | ರಾಮನಗರ | 59198 | 105832575 |
| 30 | ಯಾದಗಿರಿ | 90520 | 179033658 |
| 31 | ವಿಜಯನಗರ | 117267 | 231216714 |
| **ಒಟ್ಟು** | | **3309706** | **6280383138** |